# ಅಕ್ಷರ ದಾಸೋಹ ಕಾರ್ಯಕ್ರಮ ತಾಲ್ಲೂಕು ಪಂಚಾಯತ್,

# ಚನ್ನರಾಯಪಟ್ಟಣ

## ತಾಲ್ಲೂಕಿನ ಕಾರ್ಯಕ್ರಮದ ಪಕ್ಷಿ ನೋಟ

ಸರ್ಕಾರಿ ಆದೇಶ ಸಂಖ್ಯೆ:ಇ.ಡಿ.20 ಎಂ.ಎಂ.ಎಸ್.2000(ಭಾ) ದಿನಾಂಕ:01-01-2001ರ ಪ್ರಕಾರ ಈ ಕಾರ್ಯಕ್ರಮವನ್ನು ಮೊದಲು ಈಶಾನ್ಯ ಕರ್ನಾಟಕದ 07 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಾಗಲಕೋಟೆ, ಮತ್ತು ಬಿಜಾಪುರ ಇಲ್ಲಿಯ ಸರ್ಕಾರಿ ಪ್ರಾಥಮಿಕ ಶಾಲೆಗಳ 1 ರಿಂದ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಪ್ರಾಯೋಗಿಕವಾಗಿ ಜಾರಿಗೆ ತರುವ ಮೂಲಕ ಮಧ್ಯಾಹ್ನ ಊಟ ನೀಡುವ ಕಾರ್ಯಕ್ರಮವು 2002 ಜೂನ್ ಒಂದರಿಂದ ಪ್ರಾರಂಭಗೊಂಡಿತು.

### ಕಾರ್ಯಕ್ರಮದ ಮುಖ್ಯ ಉದ್ದೇಶ:

1) ದಾಖಲಾತಿ ಹಾಗು ಹಾಜರಾತಿಯನ್ನು ಉತ್ತಮಪಡಿಸುವುದು.

2) ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು.

3) ಪೌಷ್ಟಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.

4) ಕಲಿಕೆಯ ಮಟ್ಟವನ್ನು ಉತ್ತಮಪಡಿಸುವುದು.

ಈ ಕಾರ್ಯಕ್ರಮದ ಪ್ರಯೋಜನ ರಾಜ್ಯದ ಎಲ್ಲಾ ಮಕ್ಕಳಿಗೂ ಸಿಗುವಂತೆ ಮಾಡುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಇ.ಡಿ. 24 ಎಂ.ಎಂ.ಎಸ್.2003 ದಿನಾಂಕ:05-06-03ರ ಪ್ರಕಾರ 01-07-2003ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ **"ಅಕ್ಷರ ದಾಸೋಹ"** ಎಂಬ ಹೆಸರಿನಡಿ ವಿಸ್ತರಿಸಾಯಿತು. ಈ ಯೋಜನೆಯನ್ನು ದಿನಾಂಕ: 01-09-2004 ರಿಂದ ಸರ್ಕಾರಿ/ಅನುದಾನಿತ ಶಾಲೆಯ 6 ಮತ್ತು 7ನೇ ತರಗತಿ ಮಕ್ಕಳಿಗೆ ವಿಸ್ತರಿಸಲಾಯಿತು. ಸರ್ಕಾರಿ ಆದೇಶ ಸಂಖ್ಯೆ:ಇ.ಡಿ.27 ಎಂ.ಎಂ.ಎಸ್.2007 ದಿನಾಂಕ:19-05-2007ರ ರೀತ್ಯಾ 2007-08ನೇ ಶೈಕ್ಷಣಿಕ ಸಾಲಿನಲ್ಲಿ ದಿನಾಂಕ:01-06-07 ರಿಂದ ಜಾರಿಗೆ ಬರುವಂತೆ ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳಿಗು ಕಾರ್ಯಕ್ರಮವನ್ನು ವಿಸ್ತರಿಸಿದೆ. ಈ ಕಾರ್ಯಕ್ರಮವು ಪ್ರಾರಂಭದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತಿದ್ದು, ದಿನಾಂಕ:01-04-2005ರಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಉಸ್ತುವಾರಿಯಲ್ಲಿ ನಡೆಸಲಾಗುತ್ತಿದೆ. ತಾಲ್ಲೂಕು ಹಂತದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಇವರು ಅನುಷ್ಠಾನಾಧಿಕಾರಿಗಳಾಗಿರುತ್ತಾರೆ. ಈ ಕಾರ್ಯಕ್ರಮದಿಂದ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗಿದ್ದು ಉತ್ತಮ ಗುಣಮಟ್ಟದ ಆಹಾರ ಧಾನ್ಯ, ಎಣ್ಣೆ, ಬೇಳೆ ಕಾಳುಗಳು ಸರಬರಾಜಾಗುತ್ತಿರುವುದರಿಂದ ಪೌಷ್ಠಿಕಾಂಶ ಮಕ್ಕಳಿಗೆ ಸಿಗುತ್ತಿದ್ದು, ಮಕ್ಕಳ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆ ಸದೃಡವಾಗಿದ್ದು, ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿದೆ.ಕಾರ್ಯಕ್ರಮದಿಂದ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ತುಂಬ ಉಪಯುಕ್ತವಾಗಿದೆ. ಆದ್ದರಿಂದ ಅಕ್ಷರ ದಾಸೋಹ ಕಾರ್ಯಕ್ರಮವು ಸರ್ಕಾರದ ಜನಪ್ರಿಯ ಕಾರ್ಯಕ್ರಮವಾಗಿದೆ.

### ಹೆಚ್ಚುವರಿ ಪೌಷ್ಠಿಕಾಂಶಗಳು:

ಮಕ್ಕಳಿಗೆ ನೀಡುವ ಬಿಸಿ ಊಟದ ಜೊತೆಗೆ ಮಕ್ಕಳ ಪೌಷ್ಠಿಕತೆ ಹೆಚ್ಚಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಈ ಕೆಳಕಂಡ ಮಾತ್ರೆಗಳನ್ನು ವಿತರಿಸಲಾಗುತ್ತಿದೆ.

#### ಎ) ಜಂತು ನಿವಾರಕ ಮಾತ್ರೆಗಳು:

ಆಲ್ ಬೆಂಡಜೋಲ್-400 ಮಿಲಿ ಗ್ರಾಂ. ಒಂದು ಮಗುವಿಗೆ 6 ತಿಂಗಳಿಗೊಮ್ಮೆ ಒಂದು ಮಾತ್ರೆಯಂತೆ ವರ್ಷದಲ್ಲಿ ಎರಡು ಮಾತ್ರೆಗಳು.

#### ಬಿ) ವಿಟಮಿನ್ ಎ ಅನ್ನಾಂಗದ ಮಾತ್ರೆಗಳು

ವರ್ಷದಲ್ಲಿ 6 ತಿಂಗಳಿಗೊಮ್ಮೆ ಒಂದು ಮಗುವಿಗೆ ಎರಡು ಲಕ್ಷ ಐ.ಯು. ಎರಡು ಮಾತ್ರೆಗಳು, ಈ ಮಾತ್ರೆಗಳನ್ನು ಊಟ ಮಾಡಿದ ನಂತರ ಮಕ್ಕಳಿಗೆ ನೀಡಲಾಗುತ್ತಿದೆ.

#### ಸಿ) ಕಬ್ಬಿಣಾಂಶ ಹಾಗು ಫೋಲಿಕ್ ಆಸಿಡ್ ಮಾತ್ರೆಗಳು:

20 ಮಿಲಿ ಗ್ರಾಂ.ನ ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳು ವಾರಕ್ಕೆ 3 ಮಾತ್ರೆಯಂತೆ 36 ವಾರದಲ್ಲಿ 108 ಮಾತ್ರೆಗಳನ್ನು ವರ್ಷದಲ್ಲಿ ನೀಡಲಾಗುತ್ತಿದೆ.

ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ ವಾರದ ಶಾಲಾ ಕೆಲಸದ ದಿನಗಳಲ್ಲಿ ಹಾಗು ರಾಷ್ಟ್ರೀಯ ಹಬ್ಬದ ದಿನಗಳಲ್ಲಿ ಮಕ್ಕಳಿಗೆ ವಿವಿದ ತರಹದ ಊಟದ ವ್ಯವಸ್ಥೆ ಮಾಡಲಾಗುತ್ತಿದೆ.

**ಶಾಲೆಗಳಲ್ಲಿ ಸೂಚನ ಪಟ್ಟಿಯನ್ನು ಸಿದ್ದಪಡಿಸಿಕೊಂಡು ಊಟ ನೀಡಲಾಗುತ್ತಿದೆ.**

| ವಾರದ ದಿನ | ತಯಾರಿಸಬಹುದಾದ ಆಹಾರದ ವಿಧ |
|---|---|
| 1. ಸೋಮವಾರ | ಅನ್ನ ಸಾಂಬಾರ್ |
| 2. ಮಂಗಳವಾರ | ಅನ್ನ ಸಾಂಬಾರ್ |
| 3. ಬುಧವಾರ | ಅನ್ನ ಸಾಂಬಾರ್ |
| 4. ಗುರುವಾರ | ಅನ್ನ ಸಾಂಬಾರ್ |
| 5. ಶುಕ್ರವಾರ | ಬಿಸಿಬೇಳೆ ಬಾತ್ |
| 6. ಶನಿವಾರ | ಉಪ್ಪಿಟ್ಟು |

**ಪ್ರತಿ ಮಗುವಿಗೆ ಪ್ರತಿ ದಿವಸಕ್ಕೆ ನೀಡಲಾಗುತ್ತಿರುವ ಆಹಾರ ಪದಾರ್ಥಗಳ ವಿವರ.**

| ಕ್ರಮ ಸಂಖ್ಯೆ | ಆಹಾರ ಪದಾರ್ಥ | ತರಗತಿ 1ರಿಂದ 5 | | ತರಗತಿ 6ರಿಂದ 8 | | ತರಗತಿ 9ರಿಂದ 10 | |
|---|---|---|---|---|---|---|---|
| | | ಪ್ರಮಾಣ (ಗ್ರಾಂ ಗಳಲ್ಲಿ) | ಅಡುಗೆ ತಯಾರಿಕ ವೆಚ್ಚ | ಪ್ರಮಾಣ (ಗ್ರಾಂ ಗಳಲ್ಲಿ) | ಅಡುಗೆ ತಯಾರಿಕ ವೆಚ್ಚ | ಪ್ರಮಾಣ (ಗ್ರಾಂ ಗಳಲ್ಲಿ) | ಅಡುಗೆ ತಯಾರಿಕ ವೆಚ್ಚ |
| 1 | ಅಕ್ಕಿ | 100 | ಉಚಿತ | 150 | ಉಚಿತ | 150 | 1.40 |
| 2 | ಬೇಳೆ | 20 | 1.14 | 30 | 1.70 | 30 | 1.70 |
| 3 | ತರಕಾರಿ | 50 | 0.60 | 75 | 0.90 | 75 | 0.90 |
| 4 | ಎಣ್ಣೆ | 05 | 0.25 | 7.5 | 0.38 | 7.5 | 0.38 |
| 5 | ಉಪ್ಪು | 02 | 0.02 | 4 | 0.04 | 04 | 0.04 |
| 6 | ಅಡುಗೆ ಅನಿಲ | | 0.48 | --- | 0.72 | | 0.72 |
| 7 | ಸಾಗಾಣಿಕ ವೆಚ್ಚ | | 0.01 | --- | 0.01 | | 0.01 |
| | **ಒಟ್ಟು** | | **2.50** | | **3.75** | | **5.15** |

## ಅಡುಗೆ ಸಿಬ್ಬಂದಿ ನೇಮಕಾತಿ:

ಅಡುಗೆ ಸಿಬ್ಬಂದಿ ಆಯ್ಕೆಗಾಗಿ ಗ್ರಾಮ ಮತ್ತು ನಗರ ಪಾಲಿಕೆ ವಾರ್ಡ್ ಮಟ್ಟದಲ್ಲಿ ರಚಿಸಲಾದ ತ್ರಿಸದಸ್ಯ ಸಮಿತಿಯು ಸರ್ಕಾರಿ ಆದೇಶದಂತೆ ನೇಮಕ ಮಾಡಿಕೊಳ್ಳುತ್ತಾರೆ.

ಮುಖ್ಯ ಅಡುಗೆಯವರು ಕನಿಷ್ಟ 7ನೇ ತರಗತಿ ಉತ್ತೀರ್ಣರಾಗಿರಬೇಕು. ಅಡುಗೆ ಸಿಬ್ಬಂದಿಯವರು ಕಡ್ಡಾಯವಾಗಿ ಮಹಿಳೆಯರಿರಬೇಕು. ಅದೇ ಗ್ರಾಮದ 30 ವರ್ಷದಿಂದ 40 ವರ್ಷ ಒಳಗಿರುವ ಹೆಂಗಸರನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಎ1 ಮಾದರಿ ಕೇಂದ್ರದಲ್ಲಿ ಒಬ್ಬರು ಪ.ಜಾತಿ / ಪ.ಪಂಗಡದವರನ್ನು, ಎ ಮಾದರಿ ಕೇಂದ್ರದಲ್ಲಿ ಒಬ್ಬರು ಹಿಂದುಳಿದ ವರ್ಗಕ್ಕೆ ಒಬ್ಬರು ಪ.ಜಾತಿ/ಪ.ಪಂಗಡಕ್ಕೆ ಸೇರಿದವರನ್ನು, ಬಿ. ಮಾದರಿ ಕೇಂದ್ರದಲ್ಲಿ ಒಬ್ಬರು ಹಿಂದುಳಿದ ವರ್ಗ, ಒಬ್ಬರು ಪ.ಜಾತಿ/ಪ.ಪಂಗಡ ಒಬ್ಬರು ಸಾಮಾನ್ಯ ಗುಂಪಿಗೆ ಸೇರಿದವರನ್ನು, ಸಿ. ಮಾದರಿ ಕೇಂದ್ರದಲ್ಲಿ ಬಿ. ಮಾದರಿಯಂತೆ ನಾಲ್ಕನೇಯವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅಡುಗೆಯವರನ್ನು ಆಯ್ಕೆ ಸಮಯದಲ್ಲಿ ಪರಿಗಣಿಸಲಾಗುವುದು.

**ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಡುಗೆ ಕೇಂದ್ರಗಳನ್ನು ಎ1, ಎ, ಬಿ, ಸಿ ಎಂದು ವರ್ಗೀಕರಿಸಲಾಗಿದೆ.**

**ಎ1 ಮಾದರಿ ಅಡುಗೆ ಕೇಂದ್ರ:- 25 ಕ್ಕಿಂತ ಕಡಿಮೆ ಮಕ್ಕಳಿದ್ದಲ್ಲಿ**

| ಸಿಬ್ಬಂದಿಯ ವಿವರ | ಸಂಖ್ಯೆ | ಮಾಸಿಕ ಸಂಭಾವನೆ |
|---|---|---|

| | | |
|---|---|---|
| 1. ಮುಖ್ಯ ಅಡುಗೆಯವರು | 1 | ರೂ. 1100 |

**ಎ ಮಾದರಿ ಅಡುಗೆ ಕೇಂದ್ರ:- 25ರಿಂದ 70 ಮಕ್ಕಳಿದ್ದಲ್ಲಿ**

| ಸಿಬ್ಬಂದಿಯ ವಿವರ | ಸಂಖ್ಯೆ | ಮಾಸಿಕ ಸಂಭಾವನೆ |
|---|---|---|
| 1. ಮುಖ್ಯ ಅಡುಗೆಯವರು | 1 | ರೂ. 1100 |
| 2. ಅಡುಗೆಯವರು | 1 | ರೂ. 1000 |

**ಬಿ ಮಾದರಿ ಅಡುಗೆ ಕೇಂದ್ರ:- 70ರಿಂದ 300 ಮಕ್ಕಳಿದ್ದಲ್ಲಿ**

| ಸಿಬ್ಬಂದಿಯ ವಿವರ | ಸಂಖ್ಯೆ | ಮಾಸಿಕ ಸಂಭಾವನೆ |
|---|---|---|
| 1. ಮುಖ್ಯ ಅಡುಗೆಯವರು | 1 | ರೂ. 1100 |
| 2. ಅಡುಗೆಯವರು | 1 | ರೂ. 1000 |
| 3. ಅಡುಗೆ ಸಹಾಯಕರು | 1 | ರೂ. 1000 |

**ಸಿ ಮಾದರಿ ಅಡುಗೆ ಕೇಂದ್ರ:- 300ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ**

| ಸಿಬ್ಬಂದಿಯ ವಿವರ | ಸಂಖ್ಯೆ | ಮಾಸಿಕ ಸಂಭಾವನೆ |
|---|---|---|
| 1. ಮುಖ್ಯ ಅಡುಗೆಯವರು | 1 | ರೂ. 1100 |
| 2. ಅಡುಗೆಯವರು | 1 (ಹಿಂದುಗಳಿದ ವರ್ಗ) | ರೂ. 1000 |
| 3. ಅಡುಗೆ ಸಹಾಯಕರು | 1 | ರೂ. 1000 |
| 4. ಸಹಾಯಕರು | 1 | ರೂ. 1000 |

**ತಾಲ್ಲೂಕಿನಲ್ಲಿ ಬಿಸಿಯೂಟ ಪಡೆಯುತ್ತಿರುವ ಫಲಾನುಭವಿಗಳ ವಿವರ**

| ತರಗತಿ | 1-5 | 6-7 | 8 | 9-10 | ಒಟ್ಟು |
|---|---|---|---|---|---|
| ಸರ್ಕಾರಿ | 11475 | 5570 | 2908 | 5212 | 25165 |
| ಅನುದಾನಿತ | 1034 | 641 | 830 | 1667 | 4172 |
| **ಒಟ್ಟು** | **12509** | **6211** | **3738** | **6879** | **29337** |

**ತಾಲ್ಲೂಕಿನ ಅಡುಗೆ ಕೇಂದ್ರ ಗಳ ವಿವರ**

| ತಾಲ್ಲೂಕಿಗೆ ಮಂಜೂರಾದ ಒಟ್ಟು ಅಡುಗೆ ಕೇಂದ್ರಗಳ ಸಂಖ್ಯೆ | | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರಾಥಮಿಕ) | | | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರೌಢ) | | | |
|---|---|---|---|---|---|---|---|---|---|---|
| | ಪ್ರಾಥಮಿಕ | ಪ್ರೌಢ | ಎ1 | ಎ | ಬಿ | ಸಿ | ಎ1 | ಎ | ಬಿ | ಸಿ |
| ಸರ್ಕಾರಿ | 412 | 22 | 177 | 157 | 78 | 0 | 0 | 21 | 0 | 1 |
| ಅನುದಾನಿತ | 5 | 13 | 0 | 0 | 1 | 4 | 0 | 12 | 0 | 1 |

**ತಾಲ್ಲೂಕಿನ ಅಡುಗೆ ಸಿಬ್ಬಂದಿ ವಿವರ**

| ಒಟ್ಟು ಅಡುಗೆಯವರ ಸಂಖ್ಯೆ | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರಾಥಮಿಕ) | | | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರೌಢ ಶಾಲೆ) | |
|---|---|---|---|---|---|---|---|
| ಪ್ರಾಥಮಿಕ ಶಾಲೆ | ಪ್ರೌಢ ಶಾಲೆ | ಮುಖ್ಯ ಅಡುಗೆಯವರು | ಅಡುಗೆಯವರು | ಸಹಾಯಕರು | ಸಹಾಯಕರು | ಮುಖ್ಯ ಅಡುಗೆಯವರು | ಅಡುಗೆಯವರು |
| 749 | 92 | 409 | 252 | 87 | 01 | 22 | 70 |

**ಕಾರ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಯವರ ವರ್ಗವಾರು ವಿವರ**

| ಒಟ್ಟು ಅಡುಗೆಯವರ ಸಂಖ್ಯೆ | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರಾಥಮಿಕ) | | | | ಮಾದರಿವಾರು ಕೇಂದ್ರಗಳ ಸಂಖ್ಯೆ (ಪ್ರೌಢ ಶಾಲೆ) | | | |
|---|---|---|---|---|---|---|---|---|---|
| ಪ್ರಾಥಮಿಕ ಶಾಲೆ | ಪ್ರೌಢ ಶಾಲೆ | ಪ.ಜಾ / ಪ.ಪಂ | ಓ.ಬಿ.ಸಿ. | ಅಲ್ಪ ಸಂಖ್ಯಾತ | ಇತರೆ | ಪ.ಜಾ / ಪ.ಪಂ | ಓ.ಬಿ.ಸಿ. | ಅಲ್ಪ ಸಂಖ್ಯಾತ | ಇತರೆ |
| 749 | 92 | 270 | 51 | 23 | 502 | 3 | 16 | 07 | 38 |

| | | | | | | | | | |
|---|---|---|---|---|---|---|---|---|---|
| | | | | | | | | | |

ತಾಲ್ಲೂಕಿನ ಎಲ್ಲಾ ಅಡುಗೆ ಕೇಂದ್ರಗಳಲ್ಲೂ ಕುಡಿಯುವ ನೀರು ಮತ್ತು ಅಡುಗೆ ಕೋಣೆಯ ವ್ಯವಸ್ಥೆ ಇರುತ್ತದೆ.

ತಾಲ್ಲೂಕು ಹಂತದಲ್ಲಿ ಕಾರ್ಯಕ್ರಮ ನಿರ್ವಹಣೆಗಾಗಿ,ಸಹಾಯಕ ನಿರ್ದೇಶಕರು ಮತ್ತು ಒಂದು ಪ್ರಥಮ ದರ್ಜೆ ಸಹಾಯಕರು ಒಟ್ಟು ಎರಡು ಹುದ್ದೆಗಳು ಇರುತ್ತವೆ.

1) ಸಹಾಯಕ ನಿರ್ದೇಶಕರು: ಎಚ್.ಜಿ.ಮೋಹನ್ ಕುಮಾರ್ ಕೆ.ಇ.ಎಸ್.

2) ಪ್ರಥಮ ದರ್ಜೆ ಸಹಾಯಕರು: ಎಸ್.ಆರ್. ರವಿಶಂಕರ್ ಬಿ.ಎ.

**ಅಡುಗೆ ಕೋಣೆ ವ್ಯವಸ್ಥೆ:** ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ತಾಲ್ಲೂಕಿನ ಎಲ್ಲಾ ಅಡುಗೆ ಕೇಂದ್ರಗಳಲ್ಲೂ ಅಡುಗೆ ಕೋಣೆ ವ್ಯವಸ್ಥೆ ಇದ್ದು ವಿವಿಧ ಯೋಜನೆಗಳಲ್ಲಿ ಕೆಳಕಂಡಂತೆ ಅಡುಗೆ ಮನೆ ಮಂಜೂರಾಗಿರುತ್ತದೆ.

| ಕ್ರಮ ಸಂಖ್ಯೆ | ಸಾಲು | ಯೋಜನೆ | ಮಂಜೂರಾದ ಅಡುಗೆ ಕೇಂದ್ರಗಳು |
|---|---|---|---|
| 1) | 2004-05 | ಗ್ರಾಮ ಪಂಚಾಯತಿ ವತಿಯಿಂದ | 168 |
| 2) | 2005-06 | ನಿರ್ಮಿತಿ ಕೇಂದ್ರ | 20 |
| 3) | 2006-07 | ಎಸ್.ಡಿ.ಎಂ.ಸಿ. | 88 |
| 4) | 2007-08 | ಎಸ್.ಡಿ.ಎಂ.ಸಿ. | 142 |
| | | **ಒಟ್ಟು** | **418** |

**ಅನಿಲ ಸಿಲಿಂಡರ್ ವ್ಯವಸ್ಥೆ:** ಕಾರ್ಯಕ್ರಮದಡಿಯಲ್ಲಿ ತಾಲ್ಲೂಕಿನ ಎಲ್ಲಾ ಅಡುಗೆ ಕೇಂದ್ರಗಳಲ್ಲೂ ಅನಿಲ ಸಿಲಿಂಡರ್ ಸೌಲಭ್ಯವಿದ್ದು,ಅನಿಲ ಸಿಲಿಂಡರ್ ಬಳಸಿ ಬಿಸಿಯೂಟ ತಯಾರಿಸುತ್ತಿರುವುದು ಈ ಕಾರ್ಯಕ್ರಮದ ವಿಶೇಷ. ಕಾರ್ಯಕ್ರಮಕ್ಕಾಗಿ 1061 ಅನಿಲ ಸಿಲಿಂಡರ್‌ಗಳನ್ನು ಖರೀದಿಸಿದ್ದು,ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಿಗೆ ಸಿಲಿಂಡರ್ ವಿತರಿಸಿದೆ.

**ಶಾಲಾ ಕೈತೋಟ**: ಜಾಗದ ವ್ಯವಸ್ಥೆ ಮತ್ತು ನೀರಿನ ಸೌಲಭ್ಯವಿರುವ ಶಾಲೆಗಳಲ್ಲಿ ಸ್ವಸ್ತಿಕ್ ಪ್ಲಸ್ ಮಾದರಿಯಲ್ಲಿ ಬಯೋ-ಇಂಟೆನ್ಸಿವ್ ಗಾರ್ಡನ್ ಅಭಿವೃದ್ಧಿ ಪಡಿಸಿದ್ದು,ಹಸಿರು ತರಕಾರಿ ಸೊಪ್ಪು ನುಗ್ಗೇಕಾಯಿ ಪೊಪ್ಪಾಯಿ,ಇತ್ಯಾದಿ ಪೌಷ್ಠಿಕಾಂಶವುಳ್ಳ ತರಕಾರಿಗಳನ್ನು ಬೆಳೆದು ಬಿಸಿಯೂಟ ಕಾರ್ಯಕ್ರಮಕ್ಕಾಗಿ ಬಳಸಲಾಗುತ್ತಿದೆ.

**ಅಡುಗೆ ಸಿಬ್ಬಂದಿಯವರಿಗೆ ತರಬೇತಿ:** ಅಡುಗೆ ಸಿಬ್ಬಂದಿಯವರಲ್ಲಿ,ಶುಚಿತ್ವ,ಸುರಕ್ಷತೆ,ಹೆಚ್ಚು ಪೌಷ್ಠಿಕಾಂಶವುಳ್ಳ ಉತ್ತಮ ಗುಣ ಮಟ್ಟದ ಆಹಾರ ತಯಾರಿಸುವುದು,ಅನಿಲ ಸಿಲಿಂಡರ್ ಸುರಕ್ಷತೆ ಮತ್ತು ಮಿತವ್ಯಯ ಇವುಗಳ ಬಗ್ಗೆ ಅರಿವು ಮೂಡಿಸಲು ಆಗಿಂದ್ದಾಗ್ಗೆ ತರಬೇತಿ ನೀಡಲಗುತ್ತಿದೆ.2009-10ನೇ ಸಾಲಿನಲ್ಲಿ ತಾಲ್ಲೂಕಿನ ಎಲ್ಲಾ ಅಡುಗೆ ಸಿಬ್ಬಂದಿಯವರಿಗೆ ತರಬೇತಿ ನೀಡಲಾಗಿದೆ.

**ತೂಕ ಮತ್ತು ಅಳತೆ ಸಾಮಗ್ರಿ ಸಾಧನಗಳ ಬಳಕೆ:** ತಾಲ್ಲೂಕು ಗೋದಾಮಿನಿಂದ ಶಾಲೆಗಳಿಗೆ ಸರಬರಾಜಗುವ ಆಹಾರ ಧಾನ್ಯಗಳನ್ನು ಸರಿಯಾದ ತೂಕ ಮತ್ತು ಅಳತೆ ಪರಿಶೀಲಿಸಿಕೊಂಡು ಪಡೆಯುವ ಉದ್ದೇಶದಿಂದ ಎಲ್ಲಾ ಶಾಲೆಗಳಿಗೆ ತೂಕ ಮತ್ತು ಅಳತೆ ಸಾಧನಗಳನ್ನು ವಿತರಿಸಲಾಗಿದೆ.ಇದರ ಸಮರ್ಪಕ ನಿರ್ವಹಣೆಗಾಗಿ ತೂಕ ಮತ್ತು ಅಳತೆ ಸಾಧನಗಳ ವಾರ್ಷಿಕ ಸತ್ಯಾಪನೆ ಮತ್ತು ದುರಸ್ತಿಯನ್ನು ಮಾಡಿಸಿ ಕೊಡಲಾಗುತ್ತಿದೆ.

**ಅಡುಗೆ ಮನೆ ಶುಚಿತ್ವ ಮತ್ತು ಕುಡಿಯುವ ನೀರಿನ ಸೌಲಭ್ಯ:** ಅಡುಗೆ ಮನೆಯಲ್ಲಿ ಶುಚಿತ್ವ ಕಾಪಾಡಲು ಪ್ರತಿ ನಿತ್ಯ ಫಿನಾಯಿಲ್ ಬಳಸಿ ಸ್ವಚ್ಛ ಮಾಡಲಾಗುತ್ತಿದೆ.ಅಡುಗೆಯವರು ಸಹ ಸ್ವಚ್ಛತೆಯನ್ನು ಕಾಪಾಡುತ್ತಿದ್ದು ತಲೆಗೆ ಬಟ್ಟೆ ಕಟ್ಟಿಕೊಂಡು ಬಿಸಿಯೂಟ ತಯಾರಿಸುತ್ತಿರುತ್ತಾರೆ. ಶುಚಿಯಾದ ನೀರನ್ನು ಬಿಸಿಯೂಟಕ್ಕೆ ಬಳಸಿಕೊಳ್ಳಲಾಗುತ್ತಿದೆ.

**ಆಹಾರ ಎತ್ತುವಳಿ:** ಕೇಂದ್ರ ಸರ್ಕಾರವು 1 ರಿಂದ 8ನೇತರಗತಿಯ ಮಕ್ಕಳಿಗೆ ಅಕ್ಕಿ ನೀಡುತ್ತಿದ್ದು 9 ರಿಂದ 10ನೇ ತರಗತಿ ಮಕ್ಕಳಿಗೆ ರಾಜ್ಯ ಸಕಾರವು ನೀಡುತ್ತಿದೆ.ಆಹಾರ ದಾಸ್ತಾನು ಜಿಲ್ಲಾ ಗೋದಾಮಿನಿಂದ ತಾಲ್ಲೂಕು ಗೋದಾಮಿಗೆ ಸರಬರಾಜಗುತ್ತದೆ.ಜಿಲ್ಲಾ ಹಂತದಲ್ಲಿ ಟೆಂಡರ್ ಮೂಲಕ ಆಯ್ಕೆಯಾದ ಸಾಗಾಣಿಕೆ ಗುತ್ತಿಗೆದಾರರ ಮೂಲಕ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಿಗೆ ಆಹಾರ ಎತ್ತುವಳಿ ಮಾಡಲಾಗುತ್ತಿದೆ.

**ಪ್ರತಿ ಮಾಹೆ ಬೇಕಾಗುವ ಸರಾಸರಿ ಆಹಾರ ವಿವರ:**

ಅಕ್ಕಿ:825 ಕ್ವಿಂಟಾಲ್,ತೊಗರಿ ಬೇಳೆ: 125 ಕ್ವಿಂಟಾಲ್ ಫಾಮಾಯಿಲ್:4500 ಲೀಟರ್ ಉಪ್ಪು:30 ಕ್ವಿಂಟಾಲ್.

**ಅಡುಗೆಯವರಿಗೆ ಸಮವಸ್ತ್ರ:**

ಪ್ರಸ್ತುತ ಸಾಲಿನಲ್ಲಿ ಪ್ರತಿಯೊಬ್ಬ ಅಡುಗೆ ಸಿಬ್ಬಂದಿಯವರಿಗೂ ಸಮವಸ್ತ್ರ ಕೊಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

**ಅಗ್ನಿ ನಂದಕ ಉಪಕರಣ:**

ಅಡುಗೆ ಕೋಣೆ ಮತ್ತು ಶಾಲೆಗಳಲ್ಲಿ ಅಗ್ನಿ ಆಕಸ್ಮಿಕ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಅಗ್ನಿ ನಂದಕ ಉಪಕರಣ ವಿತರಿಸಲಾಗಿದೆ.

ತಾಲ್ಲೂಕಿನಲ್ಲಿ ಒಟ್ಟು 452 ಅಡುಗೆ ಕೇಂದ್ರಗಳಲ್ಲಿ ಬಿಸಿಯೂಟ ನಡೆಯುತ್ತಿದ್ದು,ಸಾರ್ವಜನಿಕ ಶಿಕ್ಷಣ ಇಲಾಖೆ,ತಾಲ್ಲೂಕು ಪಂಚಾಯತ್,ಗ್ರಾಮ ಪಂಚಾಯತ್,ಶಾಲಾಭಿವೃದ್ಧಿ ಸಮಿತಿ,ಶಿಕ್ಷಕರು ಹಾಗು ಅಡುಗೆಯವರ ಸಹಕಾರದಿಂದ ಯಶಸ್ವಿಯಾಗಿ ನಡೆಸಲಾಗುತ್ತಿದೆ.

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:


| | |
|---|---|
| ಎಸ್.ಆರ್.ರವಿಶಂಕರ್ | ಎಚ್.ಬಿ.ಮೋಹನಕುಮಾರ ಕೆ.ಇ.ಎಸ್. |
| ಪ್ರಥಮ ದರ್ಜೆ ಸಹಾಯಕರು | ಸಹಾಯಕ ನಿರ್ದೇಶಕರು |
| ಅಕ್ಷರ ದಾಸೋಹ ಕಾರ್ಯಕ್ರಮ | ಅಕ್ಷರ ದಾಸೋಹ ಕಾರ್ಯಕ್ರಮ |
| ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| ಕಛೇರಿ ದೂರವಾಣಿ: 08176-253967 | |
| 9844626923 | 9481668808 |